International Journal of Kannada Research 2021; 7(2): 186-187




International Journal of Kannada Research
www.kannadajournal.com

**ISSN: 2454–5813**
IJKR 2021; 7(2): 186-187
© 2021 IJKR
www.kannadajournal.com
Received: 21-02-2021
Accepted: 24-03-2021

**ಡಾ. ಹೆಚ್. ವಿ. ಶಾಂತರಾಜು**
ಸಹಾಯಕ ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ವಿಭಾಗ,
ದಾವಣಗೆರೆ ವಿಶ್ವವಿದ್ಯಾಲಯ,
ದಾವಣಗೆರೆ, ಕರ್ನಾಟಕ, ಭಾರತ

Corresponding Author:
**ಡಾ. ಹೆಚ್. ವಿ. ಶಾಂತರಾಜು**
ಸಹಾಯಕ ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ವಿಭಾಗ,
ದಾವಣಗೆರೆ ವಿಶ್ವವಿದ್ಯಾಲಯ,
ದಾವಣಗೆರೆ, ಕರ್ನಾಟಕ, ಭಾರತ

# ಅವಧೇಶ್ವರಿ ಕಾದಂಬರಿಯಲ್ಲಿ ಸ್ತ್ರೀ ಸ್ವಾತಂತ್ರ್ಯದ ಪರಿಕಲ್ಪನೆ

**ಡಾ. ಹೆಚ್. ವಿ. ಶಾಂತರಾಜು**

ಸ್ತ್ರೀ ಸ್ವಾತಂತ್ರ್ಯ, ಸಮಾನತೆ ಎನ್ನುವುದು ಪ್ರಸ್ತುತ ದಿನಗಳಲ್ಲಿ ಮಾತ್ರ ಕಂಡು ಬರುವುದಿಲ್ಲ. ವೇದಗಳ ಕಾಲದಿಂದಲೂ ಸ್ತ್ರೀ ಸ್ವಾತಂತ್ರ್ಯ ಎನ್ನುವುದು ಕಂಡು ಬರುವದ್ದಾಗಿದೆ. ಸ್ತ್ರೀಯು ವಿದ್ಯಾಭ್ಯಾಸ ಮಾತ್ರವಲ್ಲದೇ, ಆಡಳಿತದಲ್ಲೂ, ಧಾರ್ಮಿಕ ಆಚರಣೆಗಳಲ್ಲೂ ಭಾಗವಹಿಸುತ್ತಿದ್ದಳು. ಋಗ್ವೇದ ಕಾಲದಲ್ಲಿ ವಿದ್ಯಾಭ್ಯಾಸ ಪಡೆದ ಪ್ರಮುಖ ಮಹಿಳೆಯರೆಂದರೆ ಅಪಾಲ, ಘೋಷ, ವಿಶ್ವವರಾ ಮುಂತಾದವರು ಸ್ತ್ರೀಗೆ ಸಮಾನತೆ ಮತ್ತು ಸ್ವಾತಂತ್ರವೆನ್ನುವುದು ಪ್ರಾಚೀನ ಋಗ್ವೇದ ಕಾಲದಲ್ಲಿಯೇ ದೊರೆತಿತ್ತು. ಆಗ ಮಾತೃ ಪ್ರಧಾನ ಕುಟುಂಬ ಕಂಡು ಬರುತ್ತಿತ್ತು. ಆದರೆ ಇತರೆ ವೇದಗಳ ಕಾಲದಲ್ಲಿ ಸ್ತ್ರೀ ಸ್ಥಾನಮಾನ ಕುಸಿಯಲಾರಂಬಿಸಿತು. ಸ್ತ್ರೀ ಆಡಳಿತ ಮಾತ್ರವಲ್ಲದೇ ಧಾರ್ಮಿಕ ಆಚರಣೆಗಳಲ್ಲೂ ಭಾಗವಹಿಸಿದ್ದಳು ಮಧ್ಯಕಾಲೀನ ಭಾರತದ ಸಂದರ್ಭದಲ್ಲಿ ಸ್ತ್ರೀ ಸ್ವಾತಂತ್ರ್ಯ, ಸಮಾನತೆ, ಅವಕಾಶಗಳು ಇಲ್ಲವಾಗಿ ಸ್ತ್ರೀಯು ಮೂಲೆ ಗುಂಪಾದಳು, ಮನೆಗಳಲ್ಲಿ ಗೃಹಕೃತ್ಯದ ವಸ್ತುಗಳೆಂಬತೆ ಇದ್ದು ಶಿಕ್ಷಣ ಸೋಂಕಿಲ್ಲದೆ ತನ್ನತನದ ಅರಿವಿಲ್ಲದೆ, ಸ್ವವ್ಯಕ್ತಿತ್ವವಿಲ್ಲದೆ ಬದುಕುವಂತಾಯಿತು.

ಪ್ರಸ್ತುತ ಕಾದಂಬರಿಯು ವೇದಗಳ ಅದರಲ್ಲೂ ಋಗ್ವೇದ ಕಾಲದ ವಸ್ತುವನ್ನೊಂದಿರುವುದರಿಂದ ಇಲ್ಲಿ ಸ್ತ್ರೀ ಸ್ವತಂತ್ರ್ಯ ಪರಿಕಲ್ಪನೆಯನ್ನು ಕಾಣಬಹುದಾಗಿದೆ. ಈ ಕಾದಂಬರಿಯಲ್ಲಿ ಸ್ತ್ರೀ ಆಡಳಿತಾತ್ಮಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ ಸ್ವಾತಂತ್ರ್ಯ ಹೊಂದಿರುವುದನ್ನು ನೋಡಬಹುದಾಗಿದೆ ಸ್ತ್ರೀ ಇಲ್ಲಿ ಶಿಕ್ಷಿತಳಾಗಿ ಕಂಡು ಬರುತ್ತಾಳೆ ಆಡಳಿತ ಚುಕ್ಕಾಣಿಯನ್ನು ಹಿಡಿದು ರಾಜ್ಯದ ರಥವನ್ನು ಮುಂದುವರೆಸುವಷ್ಟು ಸಮರ್ಥಳಾಗಿರುವುದನ್ನು ಕಾಣಬಹುದಾಗಿದೆ. ಉದಾ: ನೃತ್ಯ ಪ್ರದರ್ಶನ.

ಹೀಗೆ ಶಂಕರ ಮೊಕಾಶಿ ಪುಣೇಕರ್ ಅವರ ಕಾದಂಬರಿಯಲ್ಲಿ ಸ್ತ್ರೀಗೆ ಅಷ್ಟೊಂದು ಕಟ್ಟು ಪಾಡುಗಳಲ್ಲಿದಿದ್ದನ್ನು ನಾವು ಕಾಣಬಹುದಾಗಿದೆ.

## ಸ್ತ್ರೀ ಸ್ವಾತಂತ್ರ್ಯ ಆಡಳಿತ:

ಋಗ್ವೇದ ಕಾಲದಲ್ಲಿ ಆಡಳಿತಾತ್ಮಕವಾಗಿ ಸ್ತ್ರೀ ಸ್ವಾತಂತ್ರ್ಯವನ್ನು ಹೊಂದಿದ್ದಳೆಂಬುದನ್ನು ಈ ಕಾದಂಬರಿ ಮೂಲಕ ಕಂಡುಕೊಳ್ಳಬಹುದು ಇಲ್ಲಿ ಪ್ರಮುಖವಾಗಿ ಕಂಡು ಬರುವ ಪಾತ್ರವೇ ರಾಣಿ ಪುರುಕುತ್ಸಾನಿ, ತಂದೆ ಮಾಂಧಾತ ಮಹಾರಾಜ, ತಾಯಿ ಬಿಂದುಮತಿದೇವಿ ಪುರುಕುತ್ಸಾನಿ ಬಾಲ್ಯದಿಂದಲೇ ಚುರುಕು ಗುಣವನ್ನು ಹೊಂದಿದ್ದಳು. ಈಕೆಯ ಸಹೋದರ ಪರುಕುತ್ಸನೊಂದಿಗೆ ರಾಜವಂಶದ ರಕ್ತ ಶುದ್ಧಿಗಾಗಿ ರಾಣಿ ಪುರುಕುತ್ಸಾನಿಯನ್ನು ವಿವಾಹ ಮಾಡಿದರು. ಪರುಕುತ್ಸನು ಇವಳೊಂದಿಗೆ ಗಂಡನಂತೆ ಇರಲಿಲ್ಲ. ಈಕೆ ತಂಗಿ ಎಂಬುದನ್ನು ಮರೆಯಲಿಲ್ಲ, ಮಗಳಿಗೆ ಮದುವೆಯ ಸೂಕ್ಷ್ಮತೆಯ ಬಗ್ಗೆ ತಿಳಿಸಬೇಕಾದ ತಾಯಿಯೂ ಈ ಮದುವೆಯನ್ನು ವಿರೋಧಿಸುತ್ತಲೇ ಮರಣ ಹೊಂದಿದಳು. ಪುರಿಕುತ್ಸ ಇಂದ್ರಿಯಾ ಸುಖದಲ್ಲಿ ವಿಷಯಾಸಕ್ತಿಯಲ್ಲಿ ತೊಡಗಿದಾಗ ಪುರುಕುತ್ಸ ಆಡಳಿತದ ಕಡೆ ಗಮನ ಹರಿಸದೇ ಹೋದಾಗ ರಾಣಿ ತಾನೇ ಆಡಳಿತ ವಹಿಸಿಕೊಂಡು ಸಾಮ್ರಾಜ್ಯವನ್ನು ಮುಂದುವರೆಸಿದಳು ಯುದ್ಧಗಳನ್ನು ಮಾಡಿ ಸಾಮ್ರಾಜ್ಯವನ್ನು ವಿಸ್ತರಿಸಿದಳು.

ಪುರುಕುತ್ಸಾನಿ ಸ್ವಾತಂತ್ರ್ಯವಾಗಿ ಆಡಳಿತ ವಹಿಸಿದ ನಂತರ ಕೈಗೊಂಡ ಮೊದಲ ಯೋಜನೆಯೇ ಅರಮನೆಗೆ ಗಣಿಕೆಯರು ಬರದಂತೆ ನಿಷೇಧಿಸಿ ಅವರು ವನದಲ್ಲಿ ರಾಜನನ್ನು ಸೇರುವಂತಹ ನೀತಿ ರೂಪಿಸಿದಳು. ಅದಕ್ಕಾಗಿ ಬಂದಿದ್ದ ಪಾಕ್ಸ್ಥಾಳನ್ನು ಗದರಿಸಿ ಅವಳನ್ನು ಸಾಮ್ರಾಜ್ಯದಿಂದ ಹೊರ ಹಾಕಿದಳು. ಅವಳಿಗೆ ಕೊಡಬೇಕಾದ ನೂರು ವರಹವನ್ನು ಕೊಡಲು ಒಪ್ಪಲಿಲ್ಲ. ಒಂದು ವರಹ ನೀಡಲು ತಿಳಿಸಿದಳು ಇವಳ ಈ ಕಾರ್ಯಕ್ಕೆ ಪುರಜನರು ಮೆಚ್ಚುಗೆಯನ್ನು ಹೇಳಿ ಸಣ್ಣ ಸಮಿತಿಯೊಂದಿಗೆ ಮಹರಾಣಿಯನ್ನು ಕಂಡು ಅವಳ ಧೋರಣೆಗೆ ತಮ್ಮ ಸಮ್ಮತಿ ಹೇಳಿ, ಹೊಗಳಿ, ಹಾಡಿ ಹಿಂದುರಿಗಿದರು.

ನಂತರ ರಾಣಿಯ ಮತ್ತೊಂದು ಚಾಣಾಕ್ಷತೆಯನ್ನು ತೋರಿದಳು ಅದು ಪಾಕ್ಸ್ಮಳನ್ನು ತನ್ನ ಉದ್ದೇಶ ಸಾಧನೆಗೆ ಬಳಸಿಕೊಳ್ಳುವುದು ಹಾಗೂ ಶ್ರಾವಸ್ತಿಯ ನಾಲ್ಕು ಹಳ್ಳಿಗಳನ್ನು ವಶಮಾಡಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾಳೆ.

ರಾಣಿ ಪುರುಕುತ್ಸಾನಿ ಶತ್ರುಗಳನ್ನು ಬಂಧಿಸುವಾಗ ತನ್ನ ಒಂದು ಪಡೆಯ ಸೈನ್ಯವನ್ನು ಮಾತ್ರ ಅವಲಂಬಿಸದೆ ಶತ್ರುವನ್ನು ಎಲ್ಲಾ ಕಡೆಯಿಂದ ಆಕ್ರಮಿಸುವಂತೆ ಮಾಡುವುದನ್ನು ನೋಡಬಹುದು. ಉದಾ:ಭಿಲ್ಲ ರಾಜರನ್ನು ಸೆರೆ ಹಿಡಿಯಲು ಒಂದು ಕಡೆ ಕಾಲಿಯ ಸೈನ್ಯ ನೇಮಿಸಿದರೆ, ಮತ್ತೊಂದು ಕಡೆ ಮತ್ಸರಾಜನ ಸೈನ್ಯವನ್ನು ನೇಮಿಸಿದಳು ಈ ಅಂಶಗಳಿಂದಾಗಿ ಪುರುಕುತ್ಸಾನಿಯ ಯುದ್ಧದ ಚಾಣಾಕ್ಷತೆಯನ್ನು ತಿಳಿಯಬಹುದಾಗಿದೆ. ಈ ರೀತಿಯಾಗಿ ರಾಣಿ ಆಡಳಿತಾತ್ಮಕ ಸ್ವತಂತ್ರವಹಿಸಿ, ಯಾವ ಮಂತ್ರಿಯ ಸಲಹೆಯಿಲ್ಲದೆ ಸ್ವಂತ ನಿರ್ಧಾರವನ್ನು ಕೈಗೊಂಡು ತನ್ನ ಸೈನ್ಯವನ್ನು ವಿಸ್ತರಿಸಿದ್ದನ್ನು ಕಾಣಬಹುದಾಗಿದೆ.

ಈ ಕಾದಂಬರಿಯಲ್ಲಿ ಬರುವ ಮತ್ತೊಂದು ಪಾತ್ರ ಕೇಶಿನಿದೇವಿ ಈಕೆಯೂ ಸಹ ತನ್ನ ಪತಿಯ ಆರೋಗ್ಯ ಸರಿಯಿಲ್ಲದ ಕಾರಣ ರಾಜ್ಯದ ಸೂತ್ರವನ್ನು ತಾನಿಡಿದು ಸ್ವತಂತ್ರವಾಗಿ ಆಡಳಿತ ನಡೆಸಿದ್ದನ್ನು ಈ ಕಾದಂಬರಿಯಲ್ಲಿ ಕಾಣಬಹುದು ಹೀಗೆ ಕಾದಂಬರಿಯಲ್ಲಿ ಸ್ತ್ರೀಯು ಆಡಳಿತಾತ್ಮಕ ಸ್ವತಂತ್ರ್ಯ ಹೊಂದಿರುವುದನ್ನು ಕಾಣಬಹುದಾಗಿದ್ದು, ಪುರುಷರಷ್ಟೇ ಅಲ್ಲದೇ ಸ್ತ್ರೀಯರು ಸಹ ಅವರಷ್ಟೇ ಸಮಾನವಾಗಿ, ಸ್ವತಂತ್ರ್ಯವಾಗಿ ಆಡಳಿತ ನಡೆಸಿದ್ದು ಈ ಕಾದಂಬರಿಯ ಪ್ರಮುಖ ಅಂಶವಾಗಿದೆ.

**ಸ್ತ್ರೀ ವಿಷಯ ಸುಖದಲ್ಲಿ ಸ್ವಾತಂತ್ರ್ಯ:**

ಸ್ತ್ರೀ ಆಡಳಿತಾತ್ಮಕತೆಯ ಸ್ವತಂತ್ರ್ಯವನ್ನು ಹೊಂದಿದ್ದಂತೆಯೆ ವಿಷಯ ಸುಖದಲ್ಲಿ ತನ್ನದೇ ಆದ ಆಯ್ಕೆ ಸ್ವತಂತ್ರ್ಯವನ್ನು ಹೊಂದಿದ್ದಳು ಇದನ್ನು ಅವಧೇಶ್ವರಿ ಕಾದಂಬರಿ ಅಚ್ಚುಕಟ್ಟಾಗಿ ನಿರ್ಮಿಸಿಕೊಡಿತ್ತದೆ. ಈ ಕಾದಂಬರಿಯಲ್ಲಿ ಬರುವ ಪ್ರಮುಖ ಗಣಿಕೆಯರಾದ ಪಾಕ್ಸ್ಮ ಮೃಗನಯನೇ, ಲಲಿತಾಂಬೆ, ಮತ್ತಿತ್ತರು ತಮ್ಮದೇ ಆದ ವೃತ್ತಿ ಧರ್ಮವನ್ನು ಹೊಂದಿದ್ದು ಇವರಲ್ಲಿ ಪಾಕ್ಸ್ಮಳು ಪುರಿಕುತ್ಸ, ದೇವರಾಜ ಭದ್ರಮುಖ, ಮಾದ್ರಕ, ತಾರ್ಕ್ಸ್ಯ ಸುಭಾನು ಹೀಗೆ ಇವರೊಂದಿಗೆ ದೈಹಿಕ ಸಂಬಂಧವನ್ನು ಹೊಂದುವಷ್ಟು ಸ್ವತಂತ್ರ್ಯ ಹೊಂದಿದ್ದಳು.

ಅಲ್ಲದೆ ಇಲ್ಲಿ ಬರುವ ಪುರುಕುತ್ಸಾನಿಯು ತನ್ನ ಗಂಡನಿಂದ ದೈಹಿಕ ಸುಖವನ್ನು ಕಾಣದೇ ತನ್ನ ಗಮನವನ್ನು ಸಂಪೂರ್ಣವಾಗಿ ರಾಜ್ಯ ವಿಸ್ತರಿಸುವಲ್ಲಿ ಮಗ್ನಳಾಗಿ, ರಾಜನನ್ನು ಒಲಿಸಿಕೊಳ್ಳುವಲ್ಲಿ ವಿಫಲಳಾಗಿ ರಾಜ ಸಂಪೂರ್ಣವಾಗಿ ಈಕೆಗೆ ದೊರೆಯದಂತಾದನು. ಇವಳು ಪುತ್ರ ಸಂತಾನಕ್ಕಾಗಿ ಹಾತೊರೆಯುತ್ತಾ ಇದ್ದಾಗ ದೇವದೇಮ ಮುನಿಗಳ ಸಲಹೆಯಂತೆ ಮಿತ್ರಾವರಣ ಯಾಗವನ್ನು ಮಾಡಲು ಒಪ್ಪಿದಳು. ಈ ಯಾಗವೇ ಆಕೆಯ ವಿಷಯ ಸುಖ ಸ್ವತಂತ್ರ್ಯವನ್ನು ತಿಳಿಸುತ್ತದೆ.

**ಧಾರ್ಮಿಕ ಸ್ವಾತಂತ್ರ್ಯ:**

ಮಾನವ ತನ್ನ ಜೀವನವನ್ನು ಶಿಸ್ತುಬದ್ಧವಾಗಿ ನಡೆಸಬೇಕಾದರೆ ಆತನಿಗೆ ಧಾರ್ಮಿಕ ಕಟ್ಟಳೆಬೇಕು. ಆಗ ತಾನೇ ಮಾನವ ಒಂದು ನೀತಿ ಕಟ್ಟಳೆಗಳಲ್ಲಿ ಬದುಕಬಲ್ಲನು. ಧರ್ಮದ ಆಚರಣೆ ಎಂಬುದು ಕೇವಲ ಪುರುಷನಿಗೆ ಸೀಮಿತವಾಗಿಲ್ಲ. ಸ್ತ್ರೀಯೂ ಸಹ ಧಾರ್ಮಿಕವಾದ ಆಚರಣೆಗಳಲ್ಲಿ ಭಾಗವಹಿಸುತ್ತಿದದ್ದನ್ನು ಪ್ರಾಚೀನ ಕಾಲದಿಂದಲೂ ಕಾಣಬಹುದಾಗಿದೆ.

ಪ್ರಸ್ತುತ ಅವಧೇಶ್ವರಿ ಕಾದಂಬರಿಯಲ್ಲಿ ಸ್ತ್ರೀಗೆ ಧಾರ್ಮಿಕ ಕಾರ್ಯಗಳಲ್ಲಿ ಯಾವುದೇ ನಿರ್ಬಂಧವಿಲ್ಲದೆ ಆಕೆಗೆ ಸ್ವತಂತ್ರ್ಯವನ್ನು ನೀಡಲಾಗಿತ್ತು ಎಂಬುದನ್ನು ಈ ಕಾದಂಬರಿಯಲ್ಲಿ ತರಲಾಗಿದೆ. ರಾಣಿ ಪುರುಕುತ್ಸಾನಿ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವುದರ ಜೊತೆಗೆ ಅನೇಕ ಧಾರ್ಮಿಕ ನಿರ್ಣಯಗಳನ್ನು ಸ್ವತಂತ್ರ್ಯವಾಗಿ ತೆಗೆದುಕೊಳ್ಳುವುದನ್ನು ಕಾದಂಬರಿಯಲ್ಲಿ ಕಾಣಬಹುದು. ಋಗ್ವೇದ ಬ್ರಾಹ್ಮಣರು ಶತಚಂಡಿ ಯಾಗವನ್ನು ವಿರೋಧಿಸಿದಾಗ ರಾಣಿ ತನ್ನ ಸ್ವಂತ ನಿರ್ಣಯದಿಂದ ರಾಜ ಪುರುಕುತ್ಸಾನನ ಆರೋಗ್ಯ ಸುಧಾರಿಸಲು "ವಾಸಂತಿಕ ದೇವಾಲಯದಲ್ಲಿ ಮಂತ್ರದ ಶತಾವರ್ತನೆ ಮಾಡಬೇಕೆಂದು ತಿಳಿಸಿದಳು" ಈ ರೀತಿಯಾಗಿ ಸ್ತ್ರೀ ಒಬ್ಬಳು ಧಾರ್ಮಿಕ ತೀರ್ಮಾನ ಕೈಗೊಳ್ಳುವ ಸಾಮಾರ್ಥ್ಯ ಬಹುಶಃ ಋಗ್ವೇದವನ್ನು ಹೊರತುಪಡಿಸಿ ಬೇರೆ ಯಾವ ವೇದಗಳ ಸಂದರ್ಭದಲ್ಲಿ ಕಾಣಬರುವುದಿಲ್ಲ. ಈ ತೆರನಾಗಿ ಕಾದಂಬರಿಯಲ್ಲಿ ಸ್ತ್ರೀಗೆ ಧಾರ್ಮಿಕವಾಗಿ ಸ್ವತಂತ್ರವಿರುವುದನ್ನು ಕಾಣಬಹುದು.

**ಪರಾಮರ್ಶನ ಗ್ರಂಥಗಳು:–**

1. ಅವಧೇಶ್ವರಿ – ಶಂಕರ ಮೊಕಾಶಿ ಪುಣೇಕರ್
2. ಮಹಿಳೆ:ಅಸ್ಥಿತ್ವದ ಸಂಕಥನ – ಡಾ. ಕವಿತಾ ರೈ.